ಶ್ರೀ ಕೆ.ಎಸ್. ಈಶ್ವರಪ್ಪ : ಯಾವುದೇ ಟೆಂಡರ್ ಕರೆಯದ ಅಡ್ವಾನ್ಸ್ ಕೊಟ್ಟಿದ್ದಾರೆ. ಇದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ಆಗಿದೆ.

ಅಧ್ಯಕ್ಷರು : ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. 2 ಕೋಟಿ ರೂಪಾಯಿ ಅಡ್ವಾನ್ಸ್ ಕೊಡಿಸಿ ನಾನು 100 ಕಂಪ್ಯೂಟರ್‌ಗಳನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ನಿಮ್ಮ ನೋಟೀಸ್ 9–45 ಘಂಟೆಗೆ ಬಂದಿದೆ, ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಬಿ.ಎಸ್. ಯಡಿಯೂರಪ್ಪ : 100 ಕಂಪ್ಯೂಟರ್‌ಗಳನ್ನು ಸೇಮ್ ಕಂಪನಿಯಿಂದ ಕೊಡಿಸುತ್ತೇನೆ. ಇದು 3 ಕೋಟಿ ರೂಪಾಯಿ ನುಂಗಿರುವ ಹಗಲು ದರೋಡೆ ಈ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕು.

ಅಧ್ಯಕ್ಷರು : ಮುಗಿಯಿತು ಬಿಡಿ ಯಡಿಯೂರಪ್ಪನವರೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಯಿತು. ಮಾಡಿಕೊಡೋಣ. ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 3 ಕೋಟಿ ರೂಪಾಯಿ ದುರ್ವ್ಯವಹಾರ ನಡೆದಿರುವ ಘಟನೆ ಸ್ವಾಮಿ ಇದು.

ಅಧ್ಯಕ್ಷರು : ನಾನು ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :

ಮಾನ್ಯ ಅಧ್ಯಕ್ಷರೆ, ನಾನು ಕಳುಹಿಸಿರುವ ನಿಲುವಳಿ ಸೂಚನೆ 9 ಘಂಟೆಗೆ ಸರಿಯಾಗಿ ತಲುಪಿರತಕ್ಕದ್ದು. ಪೂರ್ಣ ಸಮಯ ಕೊಟ್ಟು ಕಳುಹಿಸತಕ್ಕದ್ದು ಕುಣಿಗಲ್ ಪ್ರಕರಣದ ಬಗ್ಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಅದಕ್ಕೆ ಎಲ್ಲಾ ಪಕ್ಷಗಳ ಮುಖಂಡರುಗಳು ಸಹಿ ಹಾಕಿದ್ದಾರೆ. ಅದು ಹೊತ್ತಿಗೆ ಸರಿಯಾಗಿ ಹೋಗಿದೆ. ಅದು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೇ? ಇದರಲ್ಲಿ ತಾಂತ್ರಿಕ ತೊಡಕುಗಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು 11 ಘಂಟೆಗಿಂತ ಮುಂಚೆ ನೋಟೀಸ್ ಕೊಟ್ಟಿದ್ದೇನೆ ಸ್ವಾಮಿ. ಇವತ್ತು ಕೊಟ್ಟಿದ್ದೇನೆ. ಮೂರು ದಿವಸ ಮುಂಚೆ ಕೊಟ್ಟಿದ್ದು ತೆಗೆದುಕೊಂಡಿದ್ದಾರೆ. ಇವತ್ತು ಸಮಯಕ್ಕೆ ಸರಿಯಾಗಿ ನಾನು ಕಳುಹಿಸಿಕೊಟ್ಟಿದ್ದೇನೆ. ಕುಣಿಗಲ್ ಹಗರಣದ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾಗಿದೆ. ಕುಣಿಗಲ್‌ನಲ್ಲಿ ನಡೆದಂಥ ಹಗರಣ ಏನಿದೆ....

† ದ.ಅ. 4 ವಿಷಯ : ಕುಣಿಗಲ್‌ನಲ್ಲಿ ನಡೆದಂಥ ಕೊಲೆ ಘಟನೆ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಕಳುಹಿಸಿರತಕ್ಕ ನಿಲುವಳಿ ಸೂಚನೆ, ಈ ರಾಜ್ಯದಲ್ಲಿ ಒಂದು ಉಪಚುನಾವಣೆ ನಡೆಯಿತು. ಕಳೆದ ತಿಂಗಳು 8ನೇ ತಾರೀಖು ನಡೆಯಿತು. ಆ ದಿವಸ ಕುಣಿಗಲ್‌ನಲ್ಲಿ ಒಂದು ಪ್ರಕರಣ ನಡೆಯಿತು. ಅದು ಪತ್ರಿಕೆಗಳಲ್ಲಿ ಬಂದಿದೆ. ನಾವು ವಿರೋಧ ಪಕ್ಷದವರು ಒಟ್ಟಾರೆ ರಾಜ್ಯಪಾಲರನ್ನು ಕಂಡು ಮನವಿ ಸಲ್ಲಿಸಿದ್ದೇವೆ. ಉಪವಾಸ ಕೂತಿದ್ದೇವೆ. ಎಲ್ಲಾ ವಿರೋಧ ಪಕ್ಷದ ನಾಯಕರು ಸುಮಾರು 80 ಕಿಲೋಮೀಟರ್‌ವರೆಗೆ ಪಾದಯಾತ್ರೆ ಮಾಡಿದ್ದೇವೆ. ಬಹಳ ಮುಖ್ಯವಾಗಿರತಕ್ಕದ್ದು ಏನೆಂದರೆ ಗಂಗಯ್ಯ ಎಂಬುವವರು ಕೊಲೆಗೀಡಾಗಿದ್ದಾರೆ ಎಂದು ಹೇಳುವುದಕ್ಕೆ ಸಂಬಂಧಪಟ್ಟ ಇಲಾಖೆಯವರು ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ಎಫ್.ಐ.ಆರ್. ಪ್ರತಿ ಇಲ್ಲಿದೆ. ಅದನ್ನು ತಮ್ಮ ಟೇಬಲ್ ಮೇಲೆ ಇಡುತ್ತೇನೆ. ದಿನಾಂಕ 8–6–1992ರಂದು ಮಧ್ಯಾಹ್ನ 12 ಘಂಟೆಯಿಂದ ಸಂಜೆ 6 ಘಂಟೆಯವರೆಗೆ ಕುಣಿಗಲ್ ಟೌನ್ ಪ್ರವಾಸಿ ಮಂದಿರದ ಹತ್ತಿರ ಪೂರ್ವ ದಿಕ್ಕಿಗೆ ಸುಮಾರು 2 ಕಿಲೋಮೀಟರ್‌ನಲ್ಲಿ ಈ ಘಟನೆ ನಡೆದಿದೆ. ಇದನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. 302ನೇ ಸೆಕ್ಷನ್‌ನಂತೆ ಕೇಸ್ ರಿಜಿಸ್ಟರ್ ಆದಮೇಲೆ ಪ್ರಾರಂಭಿಕವಾಗಿ ನಡೆಯತಕ್ಕ ಮೊದಲನೇ ಕೆಲಸ ಎಂದರೆ ಸಂಬಂಧಪಟ್ಟ ಅಪರಾಧಿಯನ್ನು ಬಂಧನ ಮಾಡತಕ್ಕದ್ದು. ಇಲ್ಲಿ ಎರಡನೇ ಅಪರಾಧಿ ಇಲ್ಲ. ಒಬ್ಬರೇ ಅಪರಾಧಿ. ಗಂಡನನ್ನು ಕಳೆದುಕೊಂಡಿರತಕ್ಕ ಹೆಣ್ಣು ಮಗಳು ಅಪರಾಧಿ ಯಾರು ಎಂದು ಗುರುತಿಸಿ ತಮ್ಮ ಕಂಪ್ಲೇಂಟ್ ಕೊಟ್ಟಿದ್ದಾಳೆ. ಮಾನ್ಯ ಅಧ್ಯಕ್ಷರೆ, ಇಲ್ಲಿ

ಬಹುಮುಖ್ಯವಾಗಿ ಇದಕ್ಕೆ ಸಂಬಂಧಪಟ್ಟ ಹಾಗೆ ಈ ರಾಜ್ಯದ ಮಂತ್ರಿಗಳ ಮೇಲೆ 302ನೇ ಸೆಕ್ಷನ್ ಜಾರಿಯಾಗುವುದಿಲ್ಲವೇ ಎಂಬ ಶಂಕೆ ರಾಜ್ಯದ ಜನರಿಗೆ ಬಂದಿದೆ. ಮಂತ್ರಿಗಳೂ ಕೂಡಾ ಸ್ವಲ್ಪ ಹೆಚ್ಚು ಕಡಿಮೆ ಈ ಪ್ರಕರಣವನ್ನು ಒಪ್ಪಿ ಒಂದು ಪತ್ರಿಕಾ ಹೇಳಿಕೆಯನ್ನು ಮಾಡಿದ್ದಾರೆ. ನಾನು ಅದರ ಸಾರಾಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರು ಆಪಾದನೆ ಮಾಡಿರತಕ್ಕದ್ದು ವಿರೋಧ ಪಕ್ಷಗಳನ್ನೇ ಹೊರತು ಪತ್ರಿಕೆಯನ್ನಲ್ಲ ನನಗೆ ಬಂದಿರತಕ್ಕದ್ದು ಅಧಿಕೃತ ದಾಖಲೆಯಾಗಲಿ ಎಂದು ಹೇಳುತ್ತಿದ್ದೇನೆ. ಶ್ರೀಮಾನ್ ರಮೇಶ್‌ರವರು ಜೂನ್ 30, Former Kannada and Culture Minister Mr. Ramesh to-day charged the Opposition parties with a conspiracy to finish him.off politically. ಎಂದು ಹೇಳಿದ್ದಾರೆ ನಮ್ಮ ಉದ್ದೇಶ ಅದು ಅಲ್ಲ. ರಾಜ್ಯದ ಕಾನೂನುಗಳು ಶಾಸಕರಿಗೂ ಒಂದೇ, ಮಂತ್ರಿಗಳಿಗೂ ಒಂದೇ, ಸಾಮಾನ್ಯರಿಗೂ ಒಂದೇ. ಆದುದರಿಂದ, let the criminal law take its own course. This is all our concern. ವೈಯಕ್ತಿಕವಾಗಿ ನಮಗೆ ಯಾರ ಬಗ್ಗೆಯೂ ದ್ವೇಷ, ವೈಷಮ್ಯ ಇಲ್ಲ. ಅವರು ಏನು ಹೇಳಿದ್ದಾರೆ ಅಂದರೆ : "Addressing a rally in front of his residence, Mr. Ramesh urged loaders of political parties including the leader of the opposition in the Legislature"

Referring to me,

".....Mr. D.B. Chandre Gowda and Mr. M.C. Nanaiah to give up petty politics. Even if there was an iota of evidence leading to his involvement in the firing in which one person was killed on June 8th, in Kunigal, he would quit politics.

This is not my concern. It is for the law to take its own course.

"Mr. Ramesh was speaking in public for the first time after a murder case was filed against him."

ಸಂಬಂಧ ಏನು ಎಂದು ಹೇಳಿಬಿಡುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ನ್ಯಾಯಾಂಗ ತನಿಖೆ ಇನ್ನೂ ಆಗದೇ ಇರುವುದರಿಂದ.....

ಶ್ರೀ ಡಿ.ಬಿ. ಚಂದ್ರೇಗೌಡ : ಅವರೇ ಹೇಳಿರತಕ್ಕದ್ದನ್ನು ಹೇಳುತ್ತೇನೆ. ಅವರು ಏನು ಹೇಳಿದ್ದಾರೆ ?

"After the stone throwing, the mob tried to enter the bungalow. The gunman has no other alternative but to resort to firing.

This is the statement by the provious Minister of this Government.

"But for the gunman's timely action, all of us would have been lynched he claimed.

This is the portion which I would like to refer.

ಶ್ರೀ ಆರ್. ದಯಾನಂದರಾವ್ : ಜ್ಯುಡಿಷಿಯಲ್ ಎನ್‌ಕ್ವಯರಿ ನಡೀತಾ ಇರುವಾಗ ಅದನ್ನು ಇಲ್ಲಿ ಚರ್ಚೆ ಮಾಡಿದರೆ ಸಬ್‌ಜ್ಯುಡೀಸ್ ಆಗುತ್ತದೆ.

ಅಧ್ಯಕ್ಷರು : ಎನ್‌ಕ್ವಯರಿ ನಡೆಯುತ್ತಾ ಇದೆಯೇ?

ಶ್ರೀ ಆರ್. ದಯಾನಂದರಾವ್ : ಸ್ಟಾರ್ಟ್ ಆಗುತ್ತೆ.

ಅಧ್ಯಕ್ಷರು : ಎನ್‌ಕ್ವಯರಿಗೆ ಯಾರು ಜಡ್ಜ್?

ಶ್ರೀ ಆರ್. ದಯಾನಂದರಾವ್ : ಸರ್ಕಾರದ ಎನ್‌ಕ್ವಯರಿಗೆ ಆರ್ಡರ್ ಮಾಡಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಮಗೆ ಪೊಲೀಸ್ ಮ್ಯಾನ್ಯುಯಲ್ ಇದೆ. We have to go by that. Even if it is my gunman, ಕ್ಲಿಯರ್ ಆಗಿ ಅವರು ಹೇಳಿದ್ದಾರೆ. ಗನ್‌ಮ್ಯಾನ್ ಫೈರ್ ಮಾಡದೇ ಇದ್ದಿದ್ದರೆ ನಮ್ಮ ಜೀವಕ್ಕೇ ಅಪಾಯ ಇತ್ತು ಎಂದು ಹೇಳಿದ್ದಾರೆ.

ಅದರಲ್ಲಿ ಸತ್ಯ ಇರಬಹುದು. ಅದರ ಬಗ್ಗೆ ನಾನು ಎರಡನೇ ಮಾತು ಹೇಳುವುದಿಲ್ಲ. ಆದರೆ ಅನೇಕ ಪ್ರಕ್ರಿಯೆಗಳು ಇವೆ. ನಾನು 9ನೇ ತಾರೀಖು ಪತ್ರಿಕಾ ಹೇಳಿಕೆ ಮಾಡಿದೆ. "This is a clear case of murder. To camouflage the murder, firing is made." ಪ್ರೈಮಾಫೀಸಿ ಕೊಲೆ ಮಾಡಿದ್ದಾರೆ ಎಂದು. ನಮಗೆ ಈ ಸದನ is entitled to know what is the report sent by the Deputy Commissioner of the District who is the District Magistrate. What is the report sent by the Tahsildar, who is the Taluk Magistrate, on this question? Secondly, recently after the incident, both the Deputy Commissioner and the Inspector who registered the case have been transferred.

ಈ ರೀತಿ ಈ ರಾಜ್ಯದಲ್ಲಿ ನಡೆಯುವುದಾದರೆ ನಾನು ಹೇಳಿದ್ದೇನೆ. ಇಲ್ಲಿ ಸಾಧಾರಣವಾಗಿ ನಮ್ಮ ಗನ್‌ಮ್ಯಾನ್‌ಗಳ ಹತ್ತಿರ ಇರುವುದು, ತಮ್ಮ ಗನ್‌ಮ್ಯಾನ್ ಹತ್ತಿರ ಇರುವುದರಲ್ಲಿ ಶೂಟ್ ಮಾಡಿದರೆ 50 ಅಡಿಗಿಂತಲೂ ಮುಂದೆ ಗುಂಡು ಹೋಗತಕ್ಕ ವ್ಯವಸ್ಥೆ ಇಲ್ಲ. ಯಾವುದೋ ಸ್ಟಾಫ್ ಹಳೇದು ಒಂದು ರಿವಾಲ್‌ವರ್ ಕೊಟ್ಟಿದ್ದಾರೆ. ಅದರಿಂದ ಹೊಡೆದರೆ 15 ಅಡಿಯಿಂದ 50 ಅಡಿ ದೂರದ ಅಷ್ಟೇ ಹೋಗುವುದು. ಆದರೆ ಇಲ್ಲಿ ಸುಮಾರು 300 ಅಡಿಯವರೆಗೂ ಹೋಗಿದೆ. ಆದುದರಿಂದ ಅಲ್ಲಿ ಬಳಕೆಯಾಗಿರತಕ್ಕದ್ದು ಸ್ಟೆನ್‌ಗನ್. ಆಸ್ಟೆನ್‌ಗನ್ ಕೂಡಾ ಯಾರು ಬಳಕೆ ಮಡಲು ತರಬೇತಿ ಪಡೆದಿರುತ್ತಾರೋ ಅಂತಹವರಿಂದ ಬಳಕೆ ಆಗಿಲ್ಲ. ಯಾರೋ ಒಬ್ಬರು ಗನ್‌ನಿಂದ ಹೊಡೆದಿದ್ದಾರೆ. ಇಂತಹ ವಿಚಾರದಲ್ಲಿ ತಕ್ಷಣವೇ ನಮಗೆ ಇರತಕ್ಕ ಗನ್‌ಮ್ಯಾನ್ ಎಷ್ಟು ಹತ್ತಿರದಲ್ಲಿ ಸಾಧ್ಯವೋ, ಎಷ್ಟು ಬೇಗ ಸಾಧ್ಯವೋ ಅಷ್ಟು ವೇಗದಲ್ಲಿ ಹತ್ತಿರ ಇರತಕ್ಕ ಮ್ಯಾಜಿಸ್ಟ್ರೇಟ್‌ಗೆ ತಾನು ಎಂತಹ ಅಪರಾಧವನ್ನು ಮಾಡಿದ್ದೇನೆಂದು ಹೇಳಬೇಕಾಗುತ್ತದೆ. ತಾನು ಮಡಿದ ಅಪರಾಧ ಹಾಗೂ ತನ್ನ ಬಳಿ ಆದನ್ನು ಸರಂಡರ್ ಮಾಡಬೇಕಾಗುತ್ತದೆ.

ಇವೆಲ್ಲಾ ಪ್ರಕ್ರಿಯೆಗಳು ನಡೆದಿವೆಯೇ? ಇಲ್ಲಿ ಜ್ಯೂಡಿಷಿಯಲ್ ಎನ್‌ಕ್ವಾಯಿರಿ ಯಾವಾಗ ಆಗುತ್ತದೆ? ನಡೆದಿರತಕ್ಕ ಸಾವು ಅನುಮಾನಸ್ಪದವಾಗಿದೆ. ಅದಕ್ಕಾಗಿ ತನಿಖೆ ಮಾಡಬೇಕು, ನೀವು ಏನೇನು ತನಿಖೆ ಮಾಡುತ್ತಾ ಇದ್ದೀರಿ? ಗಂಡನನ್ನು ಕಳೆದುಕೊಂಡಿರುವ ಹೆಣ್ಣುಮಗಳು ಶ್ರೀಮಾನ್ ರಮೇಶ್‌ರವರು ನನ್ನ ಗಂಡನನ್ನು ಕೊಲೆ ಮಾಡಿದ್ದಾರೆಂದು ಹೇಳಿದ್ದರೆ ರಮೇಶ್‌ರವರು ನಾನಲ್ಲ, ನನ್ನ ಗನ್‌ಮ್ಯಾನ್ ಹೊಡೆದಿದ್ದಾನೆಂದು ಅವರು ಹೇಳುತ್ತಾರೆ. ಎಲ್ಲಿದೆ ಸತ್ಯ ಇದರಲ್ಲಿ? ಆದ್ದರಿಂದ ಕ್ರಿಮಿನಲ್ ಪ್ರೊಸಿಜರ್ ಕೋಡ್ 302ರ ಪ್ರಕಾರ ಒಂದು ಸಾರಿ ಕೇಸು ದಾಖಲಾದ ಮೇಲೆ ಅಪರಾಧಿಯನ್ನು ಬಂಧಿಸತಕ್ಕದ್ದು ಮೊದಲನೆಯ ಕೆಲಸ. ಆಮೇಲೆ ನಡೆದಿರತಕ್ಕ ಪ್ರಕ್ರಿಯೆಗಳು ಏನು? ತದ್ವಿರುದ್ಧ. ಸಂಪೂರ್ಣವಾದ ರಕ್ಷಣೆಯನ್ನು ಆ ಅಪರಾಧಿಗೆ ಕೊಟ್ಟು ಪೋಲೀಸ್ ಇಲಾಖೆಯವರು ಕೊಟ್ಟು ಈ ಸರ್ಕಾರ ಕೊಟ್ಟು ಯಾರು ಈ ಕೇಸನ್ನು ರಿಜಿಸ್ಟರ್ ಮಾಡುತ್ತಾರೆ ಅಂತಹ ಇನ್‌ಸ್ಪೆಕ್ಟರ್‌ನ್ನು ವರ್ಗ ಮಾಡಿಸಿದ್ದಾರೆಂದು ಪತ್ರಿಕೆಯಲ್ಲಿ ಬರುತ್ತದೆ. ಯಾರು ಇವರ ವಿರುದ್ಧ ನಾಮ ಫೈರಿಂಗ್ ಮಾಡಲಿಲ್ಲ, ಮಾಡುವುದಕ್ಕೆ ನನ್ನ ಆದೇಶವಿರಲಿಲ್ಲವೆಂದು ಜಿಲ್ಲಾ ಮ್ಯಾಜಿಸ್ಟ್ರೇಟರ್ ಹೇಳುತ್ತಾರೋ ಅಂತಹ ಡಿಪ್ಯುಟಿ ಕಮೀಷನರ್ ಅವರ ವರ್ಗಾವಣೆಯಾಗುತ್ತದೆ. ಹೀಗಾದರೆ ಜನರಿಗೆ ರಕ್ಷಣೆ ಕೊಡತಕ್ಕ ಸರ್ಕಾರವೇ ಇಂತಹ ಬೇಜವಾಬ್ದಾರಿ ಕೆಲಸಗಳನ್ನು ಮಾಡುತ್ತಾ ಹೋಗುವುದು ಸರಿಯೆ? ಇದರ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶ ಇಲ್ಲವೆಂದು ಹೇಳುವುದಾದರೆ ನಾವು ಇಲ್ಲಿ ಕೂತು ಕೆಲಸ ಮಾಡುವುದು ಕಷ್ಟವಾಗುತ್ತದೆ. ಹಾಗಾದರೆ ಇದರ ಆಗತ್ಯವಿಲ್ಲ, ಈ ಶಾಸನಸಭೆಯನ್ನು ಮುಚ್ಚಿಬಿಡೋಣ. ನಿಮ್ಮ ಸಂಸದೀಯ ಜೀವನದ ಅನುಭವ ಪ್ರಶ್ನಾತೀತವಾದದ್ದು; ಕಳೆದ ಮೂರು ದಶಕಗಳಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೀರಿ. ಈ ಸಭೆಯ ಸಾರ್ವಭೌಮತ್ವವನ್ನು ಕಾದುಕೊಂದು ಬರಬೇಕಾಗಿದೆ. ಆ ಕಾರಣದಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ; ಈವೊಂದು ವಿಚಾರದಲ್ಲಿ ಸುದೀರ್ಘವಾಗಿ ಚರ್ಚೆಯಾಗಬೇಕು. ಕೊಲೆಗಡುಕರು ಯಾರಿದ್ದಾರೆ ಅವರು ಎಷ್ಟೇ ದೊಡ್ಡವರು ಇರಲಿ, ರಾಷ್ಟ್ರಪತಿಯಿಂದ ಹಿಡಿದು ಸಾಮಾನ್ಯ ಪ್ರಜೆಯವರೆಗೆ ಶಾಸನ ಒಂದೇ. ಇದನ್ನು ನಾವು

ರಾಜ್ಯಾಂಗದಲ್ಲಿ ಅಳವಡಿಸಿಕೊಂಡಿದ್ದೇವೆ. ಆದರ ವಿರುದ್ಧವಾಗಿ ಒಂದು ಸಾಧಾರಣಾದ ಸರ್ಕಾರ ಕಾರ್ಯಾಚರಣೆ ಮಾಡುತ್ತದೆ ಅಂದರೆ ಅದನ್ನು ಪ್ರಶ್ನೆ ಮಾಡತಕ್ಕ ಹಕ್ಕು ನಮಗೆ ಇಲ್ಲವೇ? ಅದು ಇಷ್ಟಕ್ಕೇ ನಿಂತಿದ್ದರೆ ನನಗೆ ವ್ಯಥೆ ಇರಲಿಲ್ಲ. ನಿಮ್ಮ ರಕ್ಷಣೆ ಮಾಡುವುದಕ್ಕೆ ಇಟ್ಟುಕೊಂಡವನ ಮೇಲೆ ನೀವು ಮಾಡಿದಂತಹ ಅಪರಾಧದ ಹೊರೆಯನ್ನು ಹಾಕಿ ತಪ್ಪಿಸಿಕೊಳ್ಳುವಂತಹ ಪ್ರಯತ್ನ ಏನು ನಡೆದಿದೆ ಅದಕ್ಕೆ ಜ್ಯುಡಿಷಿಯಲ್ ತನಿಖೆ ಏತಕ್ಕೆ? ಈ ರಾಜ್ಯದಲ್ಲಿ ಇತಿಹಾಸವಿದೆ. ಈ ರಾಜ್ಯದ ಹೋಮ್ ಮಿನಿಸ್ಟರ್ ನಿರಪರಾಧಿಯಾಗಿದ್ದರೂ ಅಪರಾಧಿಯೆಂದು ಸಿಬಿಐನವರ ತನಿಖೆಗೆ ಒಪ್ಪಿಸಿ ನಾಲ್ಕೈದು ವರ್ಷಗಳ ಕಾಲ ಅಲೆದ ಇತಿಹಾಸವಿದೆ. ನನ್ನ ಪಕ್ಕದಲ್ಲಿಯೇ ಕುಳಿತಿದ್ದಾರೆ ಶ್ರೀಮಾನ್ ಜಾಲಪ್ಪನವರು. ಅವರಿಗೆ ಆದದ್ದು ಇವರಿಗೆ ಏತಕ್ಕೆ ಆಗಬಾರದು? ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿಯೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಕಾಗೋಡುತಿಮ್ಮಪ್ಪ ಸಾಗರ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ನಿರಪರಾಧಿಯಾದ ಮಿನಿಸ್ಟರ್ ಒಬ್ಬರನ್ನು ಅಪರಾಧಿ ಸ್ಥಾನದಲ್ಲಿ ಇರಿಸಿದ ಇತಿಹಾಸವಿದೆಯೆಂದು ಮಾನ್ಯ ಜಾಲಪ್ಪನವರಿಗೆ ಅದರಿಂದ ತೊಂದರೆಯಾಯಿತು ಎಂದು ಹೇಳಿದರು. ಆದರಿಂದ ಅಧಿಕಾರ ಕಳೆದುಕೊಂಡರು ಎಂದು ಅವರ ಬಗ್ಗೆ ಕಳವಳವನ್ನು ಹೊಂದಿದ್ದೇವೆ ಈಗಲೂ ಕೂಡ ಕಳವಳವನ್ನು ತಾವು ಇಟ್ಟುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಈಗ ನಾನೇನು ಹೇಳುವುದಕ್ಕೆ ಹೋಗುವುದಿಲ್ಲ. ಮೊದಲು ನಾನು ಸಹ ಆ ಜಾಗದಲ್ಲಿ ಇದ್ದವನು. ತನಿಖೆ ನಡೆಯುತ್ತಿದೆ. ನೀವು ಹೇಳಿ ಅಂದರೆ ಇಲ್ಲಿ ಹೇಳಿಬಿಡುವುದು ಸರಿಯಲ್ಲ. I don't want to speak anything so far as the actual incident is concerned. ನನ್ನ ಹತ್ತಿರ ಇನ್‌ಫರ್ಮೇಷನ್ ಏನಿದೆ, ಅದರ ಪ್ರಕಾರ ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ತರುವುದೇನೆಂದರೆ, ಒಂದು ಫಿರ್ಯಾದು ಕೊಟ್ಟಿದ್ದಾರೆ; ಫಿರ್ಯಾದಿ ಕೊಟ್ಟಮೇಲೆ ಕೇಸು ರಿಜಿಸ್ಟರ್ ಆಗಿದೆ. ಅಲ್ಲಿ ಏನು ಬರೆದಿದ್ದಾರೆ.

> "On 9.6.92 at 2.45 Hours received this report, through One Muniswamy, Doddahonnaiah, aged 23 years, who is the brother-in-law of the deceased and registered a case in crime No. 116/92 under Section 302, IPC." ಎಂದು;

ಆದರೆ ಯಾರ ಮೇಲೆಂದು ರಿಜಿಸ್ಟರ್ ಮಾಡಿಲ್ಲ. ಕಂಪ್ಲೆಂಟ್ ರಿಸೀವ್ ಮಾಡಿದ ಮೇಲೆ a case is registered under 302. They have not registered the case against any particular person. It is a subject matter under section 162, as to who comes in the course of investigation. It is in the process of investigation It is only a case registered under section 302. No accused has been implicated at this stage. So, let us wait for the detailed investigation.

ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಆಗುವುದಕ್ಕೆ ಮೊದಲೇ ಮೋಟೀವ್ ಇಂಟರ್‌ಪ್ರೆ ಮಾಡಿ ಇದರ ಹಿಂದೆ ಯಾರೋ ಇದ್ದಾರೆಂದು ಹೇಳಿದರೆ, innocent man may quite likely to be implicated. Let there be no repetition as it was pointed out by the Hon'ble Leader Opposition.

ಶ್ರೀ ಡಿ.ಬಿ. ಚಂದ್ರೇಗೌಡ : ಅವರ ಅಭಿಪ್ರಾಯಕ್ಕೆ ಈ ಪ್ರತಿಯನ್ನು ಕೊಡುತ್ತಿದ್ದೇನೆ. ನೀವು ಕ್ರೈಮ್ ನಂ. 116–92 ಕುಣಿಗಲ್ ಪೊಲೀಸ್, ವಿರುದ್ಧ ಆರೋಪಿ ಎಸ್. ರಮೇಶ್ ಜಿಲ್ಲಾ ವಲಯ ತುಮಕೂರು, ಕುಣಿಗಲ್ ಠಾಣೆ ಕುಣಿಗಲ್.

This is the report of the first information. ಮಾನ್ಯ ತಿಮ್ಮಪ್ಪನವರಿಗೆ ಬೇಕು ಅಂತಾದರೆ ಕಳಿಸಿಕೊಡುತ್ತೇನೆ.

Sri Kagodu Thimmappa : This is the order of the police station officer; this is the order of the registered case not implicating any person.

Sri D.B. Chandre Gowda : I am giving you the certified copy

ಅಧ್ಯಕ್ಷರು : ಯಾವುದಾದರೂ ಚಾರ್ಜ್‌ಷೀಟ್ ಹಾಕಿದ್ದಾರಾ ?

ಶ್ರೀ ಡಿ.ಬಿ. ಚಂದ್ರೇಗೌಡ : ಚಾರ್ಜ್ ಷೀಟ್ ಅಲ್ಲ. ಎಫ್.ಐ.ಆರ್.

Sri Kagodu Thimmappa : This is the order of the Station Officer. No less than a person like Mr. Krishnappa, Police Inspector himself has signed.

ರಿಜಿಸ್ಟ್ರೇಷನ್ ಆಫ್ ಕೇಸ್ ಆಗಬೇಕಾದರೆ ಅದರಲ್ಲಿ ಮೆನ್‌ಷನ್ ಆಗಿರಬೇಕು. Case is registered under section 302 against such and such a person

ಅಂತ ಹೇಳಿ ಆರ್ಡರ್ ಅದರೆ ಮಾತ್ರ that follows a FIR. He cannot go beyond this.

ಕಂಪ್ಲೇಂಟ್ ಬಂದಿದೆ. ಆದರೆ ಕಂಪ್ಲೇಟ್ ರಿಸೀವ್ ಮಾಡಿಕೊಂಡು while registering a case, he registered a case under Section 302, not against any person. This is the method of registering the case.

ಶ್ರೀ ಕೆ.ಎಚ್. ರಂಗನಾಥ್ : ಕಂಪ್ಲೇಂಟ್ ಇದೆ. ಅದರಲ್ಲಿ ಆಪಾದನೆ ಯಾರಮೇಲೆ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಬರೆದುಕೊಳ್ಳುವಾಗ ಅದನ್ನು ಬಿಟ್ಟು ಬಿಟ್ಟಿದ್ದೇವೆ ಎಂದರೆ ಹೇಗೆ ಆಗುತ್ತದೆ? ಅದು ಕಂಪ್ಲೇಂಟ್ ಅಲ್ಲವೆಂದರೆ ಆ ಮಾತು ಬೇರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಹಿರಿಯ ವಕೀಲರು ಇದ್ದೀರಿ.

Sri K.H. Ranganath : Particular complaint is registered. ಡಿಟೇಲ್ಸ್ ಎಲ್ಲಾ ಬರೆಯದೇ ಇರಬಹುದು. ಕಂಪ್ಲೇಂಟನ್ನು ರಿಜಿಸ್ಟರ್ ಮಾಡಿದ್ದಾರೆ. ಅದರ ಪ್ರಕಾರ ಇನ್‌ವೆಸ್ಟಿಗೇಷನ್ ಅನ್ನು ಅವರು ಮಾಡಬೇಕಾಗುತ್ತದೆ. ಯಾರ ಬಗ್ಗೆ ಆಪಾದನೆ ಮಾಡಿದ್ದಾರೆ, ಅದು ಸರಿಯೇ ಅಲ್ಲವೇ ಎಂದು ಅವರನ್ನು ಕರೆದು ಇಂಟರಾಗೇಷನ್ ಮಾಡಿ ಮಾಡಬೇಕಾಗುತ್ತದೆ. That has not been done that is what the Leader of the Opposition says. We are also warried about it. ಏಕೆಂದರೆ to wait for one month, more than a month since the receipt of the complaint, it is a very serious lapse on the part of any civilised Government. That is the point.

ನಾವು ಚರ್ಚೆ ಮಾಡುವುದು ಅಲ್ಲ. ಇಂತಹ ಪರಿಸ್ಥಿತಿ ಏಕೆ ಬಂತು ಎಂದು ನಾವು ಕೂಡ ವಿಚಲಿತರಾಗಿದ್ದೇವೆ. ಅವರು ನಿರಪರಾಧಿಗಳು ಇರಬಹುದು. ಯಾರು ಬೇಕೋ ಅವರನ್ನು ಇಂಟರಾಗೇಷನ್ ಮಾಡಿ ಕರೆದು ಕೇಳಿ, ಮಾಡಬೇಕು. ಇಲ್ಲದೇ ಹೋದರೆ ಇದರಲ್ಲಿ ಏನೂ ಸತ್ಯಾಂಶ ಇಲ್ಲವೆಂದು ಹೇಳಿ ವರದಿಯನ್ನು ಕೊಟ್ಟರೆ ನಮಗೆ ಈ ಕಷ್ಟವೇ ಬರುವುದಿಲ್ಲ. The government will have to take very serious action about these things. 'B' Report ಏನಾದರೂ ಕೊಟ್ಟು....

ಶ್ರೀ ಆರ್. ದಯಾನಂದರಾವ್ : ಎನ್‌ಕ್ವೈರಿ ಕಮೀಷನ್‌ಗೆ ಆರ್ಡರ್ ಮಾಡಿದ್ದಾರೆ. ಅದರಲ್ಲಿ ತೀರ್ಮಾನ ಆಗಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ನಾನು ಈ ಸೂಚನೆಗೆ ರುಜು ಹಾಕಿದ್ದರಿಂದ ಮಾತನಾಡುತ್ತಿದ್ದೇನೆ. ನಡುವೆ ಮಾತನಾಡುವುದು ಅವಶ್ಯಕವೆಂದು ಕಂಡಿದ್ದರಿಂದ ಹೇಳುತ್ತಿದ್ದೇನೆ. Crime No. 116/92 on the files of the Judicial Magistrate,

Tumkur, the only accused person is Mr. Ramesh. ಅದರ ಬಗ್ಗೆ ಚರ್ಚೆಯ ಅವಶ್ಯಕತೆಯೇ ಇಲ್ಲ; but I am only appealing to all the members of this House to allow a discussion on this matter because an hon. member of this House appears to me to be going around as a fugitive from justice. I request Mr. Ramesh to voluntarily go to the police and surrender himself, or go to the Magistrate's court and surrender himself.

ಏಕೆಂದರೆ ಇದು ನಮೆಲ್ಲರ ಮರ್ಯಾದೆಯ ಪ್ರಶ್ನೆ. ನಮಗೆಲ್ಲ ರೂಲ್ ಆಫ್ ಲಾ ಅನ್ವಯಿಸುತ್ತದೋ ಇಲ್ಲವೋ? ಅಥವಾ ನಾವು ರೂಲ್ ಆಫ್ ಲಾ ಗಿಂತ ಮೇಲಿರುವ ವ್ಯಕ್ತಿಗಳಾ? ನಮ್ಮೆಲ್ಲರ ಮರ್ಯಾದೆಯ ಪ್ರಶ್ನೆ ಇದು. ಆ ಕಾರಣ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ತಾವಾಗಿಯೇ ಹೋಗಿ ಮ್ಯಾಜೆಸ್ಟೇಟರ್ ಮುಂದೆ ಸರೆಂಡರ್ ಆಗಿ ನಮ್ಮ ಮರ್ಯಾದೆಯನ್ನು ಕಾಪಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Sri D.B. Chandre Gowda : First Information Report ಕಾಪಿ ಏನಿದೆ, ಅದನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡುತ್ತೇನೆ. "ಅದರಲ್ಲಿ ಪ್ರವಾಸಿಮಂದಿರದ ಹತ್ತಿರ ನನ್ನ ಗಂಡನನ್ನು ಕರ್ನಾಟಕ ರಾಜ್ಯದ ಮಂತ್ರಿಯಾದ ಎಸ್. ರಮೇಶ್ ಎಂಬುವರು ಪಿಸ್ತೂಲಿನಿಂದ ಹೊಡೆದು ಕೊಲೆ ಮಾಡಿದ್ದಾರೆಂದು ತಿಳಿಸಿದರು. ಇದು ನೇರವಾದ ಆಪಾದನೆ. ಈತನಕ ನನ್ನ ಗಂಡನ ಶವವನ್ನು ನನಗೆ ಒಪ್ಪಿಸಿಲ್ಲ. ಆದ್ದರಿಂದ ಕೊಲೆಗಾರ ರಮೇಶನನ್ನು ಬಂಧಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು ನನಗೆ ನ್ಯಾಯ ದೊರಕಿಸಿಕೊಡುವ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇಂತಿ ತಮ್ಮ ವಿಧೇಯಳು, ಇದು ಲಕ್ಷ್ಮಮ್ಮಳ ದೂರು."

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್‌ವೆಸ್ಟಿಗೇಷನ್ ಸಮಯದಲ್ಲಿ ಇವರು ಇಷ್ಟೊಂದು ಡೀಟೈಲ್ಸ್ ಹೇಳಿಕೊಂಡು ಹೋಗುವುದು ಸಮಂಜಸವೇ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಕ್ರಿಮಿನಲ್ ಪ್ರೊಸೀಜರ್ ಅನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. Iam reading the authenticated document.

ಶ್ರೀ ಕಾಗೋಡು ತಿಮ್ಮಪ್ಪ : ನೀವು ದೂರನ್ನು ಪೂರ್ತಿಯಾಗಿ ಓದದೆ, ರಿಲೆವೆಂಟ್ ಪ್ಯಾರಾ ಮಾತ್ರ ಓದಿ.

† ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು) : ವಿರೋಧಪಕ್ಷದ ನಾಯಕರು ಕುಣಿಗಲ್‌ನಲ್ಲಿ ಆದ ಘಟನೆ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಈಗಾಗಲೇ ಕುಣಿಗಲ್‌ನಲ್ಲಿ ಏನು ಘಟನೆಯಾಗಿದೆ, ಅದರ ಮೇಲೆ ರಮೇಶ್‌ರವರು ರಾಜೀನಾಮೆ ಕೊಟ್ಟಿದ್ದಾರೆ. ಸರ್ಕಾರ ಕೂಡಲೇ ಎಸ್.ಪಿ.ಯವರು ತನಿಖೆ ಮಾಡತಕ್ಕ ರೀತಿಯಲ್ಲಿ, ಕೊಲೆ ಪ್ರಕರಣದ ಬಗ್ಗೆ ಗಂಗಾಧರರವರ ಪತ್ನಿ ಏನು ದೂರು ಕೊಟ್ಟಿದ್ದಾರೆ, ಇದರ ಬಗ್ಗೆ ತನಿಖೆ ಮಾಡತಕ್ಕ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ಒಟ್ಟಾಗೆ ಕುಣಿಗಲ್ ದುರಂತದಲ್ಲಿ ಏನೇನು ಆಗಿದೆ, ಅವೆಲ್ಲಾ ಸಾರ್ವಜನಿಕರ ಗಮನಕ್ಕಾಗಲೀ, ತಮಗಾಗಲೀ ಬರತಕ್ಕ ರೀತಿಯಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಈ ಸನ್ನಿವೇಶದಲ್ಲಿ ಸವಿಸ್ತಾರವಾಗಿ ಚರ್ಚೆ ಪ್ರಾರಂಭ ಮಾಡಿದರೆ, ಆ ತನಿಖೆ ಮೇಲೆ ಒಂದು ತರದ ಪರಿಣಾಮ ಬೀರಬಹುದು ಎಂಬುದನ್ನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ವಿಚಾರಣೆಗೆ ನೆರವಾಗತಕ್ಕ ವಿಷಯ ಏನಾದರೂ ಪ್ರಸ್ತಾಪ ಮಾಡಿದರೆ ಸ್ವಾಗತ ಮಾಡುತ್ತೇನೆ. ಅದು ಬಿಟ್ಟು ಬೇರೆ ಡೀಟೈಲ್ಸ್ ಕೊಡತಕ್ಕ ರೀತಿಯಲ್ಲಿ ಮಾತನಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ವಿಚಾರಣೆಗೆ ಭಾದಕವಾಗತಕ್ಕ ರೀತಿಯಲ್ಲಿ ಯಾವ ವಿಚಾರವನ್ನೂ ಪ್ರಸ್ತಾಪ ಮಾಡಲಿಲ್ಲ. ನನ್ನ ಪ್ರಶ್ನೆ ಬಹಳ ಸೀಮಿತವಾದುದು. ಶ್ರೀಮತಿ ಲಕ್ಷ್ಮಮ್ಮನವರು ತನ್ನ ಪತಿಯನ್ನು ಶ್ರೀಮಾನ್ ರಮೇಶ್‌ರವರು ಕೊಂದಿದ್ದಾರೆಂದು ಹೇಳಿ, ಒಂದು ಆರೋಪವನ್ನು ಹೊರಿಸಿದ್ದಾರೆ. ಈ ಆರೋಪ ಕ್ರಿಮಿನಲ್ ಪ್ರೊಸೀಜರ್ ಕೋಡ್.....

Sri A.B. Jakanur : I rise on a point of order. You are also a lawyer. Acccrding to you, the offence is registered and the F.I.R. must have been sent to the Magistrate's Court. Now the matter is seized by the court. Therefore, we are barred from discussing this in the House.

Sri D.B. Chandre Gowda : Very interesting arguments are being made. I am thankful to my colleague. My point is ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ತನಿಖೆ ಮುಂದುವರಿಯುತ್ತದೆ ಎನ್ನುವುದು ನನಗೆ ಮುಖ್ಯವಲ್ಲ. ನನಗೆ ಮುಖ್ಯವಾಗಿರುವುದು ಬಹಳ ಸೀಮಿತವಾದುದು. ನೇರವಾಗಿ ಒಬ್ಬರೇ ಆರೋಪಿ ಇದ್ದಾರೆ, ಎರಡನೇ ಆರೋಪಿ ಹೆಸರನ್ನು ಹೇಳಿಲ್ಲ. ಆ ಆರೋಪಿ ಈ ಸದನದ ಗೌರವಾನ್ವಿತ ಸದಸ್ಯರು, ಈ ರಾಜ್ಯದ ಗೌರವಾನ್ವಿತ ಮಂತ್ರಿಯಾಗಿದ್ದವರು. ನಿರಪರಾಧಿ ವಿರುದ್ಧ ಆಕೆ ದಾವಾ ಹಾಕಿದ್ದರೆ, ಆ ನಿರಪರಾಧಿ ಶಿಕ್ಷೆಯನ್ನು ಅನುಭವಿಸಬೇಕಾದ ಅಗತ್ಯವಿಲ್ಲ. ಆದರೆ, ಪ್ರತ್ಯಕ್ಷದರ್ಶಿಗಳು ದೂರು ಕೊಟ್ಟಿದ್ದೇವೆಂದು ಹೇಳಿದ ಮೇಲೆ, criminal procedure code should be set in motion. That is all my submission.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಪ್ರತ್ಯಕ್ಷದರ್ಶಿಗಳು ಎಂದು ಹೇಳಿದಿರಿ....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಈ ರಾಜ್ಯದಲ್ಲಿ ಏನೂ ಇಲ್ಲದೆ, ಯಾವ ಅಪರಾಧವೂ ಇಲ್ಲದೆ....

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ 302ನೇ ಸೆಕ್ಷನ್ ಮೇಲೆ ಯಾರನ್ನೂ ಅರೆಸ್ಟ್ ಮಾಡುವುದಿಲ್ಲವೆಂದು ತೀರ್ಮಾನ ಮಾಡಿ.

(ಗೊಂದಲ)

Sri J.C. Madhuswamy : Let him be arrested. Let him take bail.

Sri. D.B. Chandre Gowda : A copy of the FIR and the complaint No. 38/92, I am tabling in the House for your kind information.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಚಂದ್ರೇಗೌಡರು ಏನು ಹೇಳಿದರು ಎಂದರೆ....

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಅವರು ತಮ್ಮಲ್ಲಿರುವ ವಿವರಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆ. ಎಂದರೆ, ಲಕ್ಷ್ಮಮ್ಮ ಎನ್ನತಕ್ಕಂಥವರು, ನನ್ನ ಗಂಡನನ್ನು ಇಂತಹವನು ಹೊಡೆದ ಎಂದು ಇಂತಹವರು ಬಂದು ಹೇಳಿದರು ಎಂದು ಹೇಳುತ್ತಿದ್ದಾರೆಯೇ ಹೊರತು ಲಕ್ಷ್ಮಮ್ಮನೇ ನೇರವಾಗಿ ನನ್ನ ಗಂಡನನ್ನು ರಮೇಶ್ ಹೊಡೆದಿದ್ದಾರೆ ಎಂದು ಆಪಾದನೆ ಮಾಡಿದ್ದರೆ ಅದು ಬೇರೆ ಪ್ರಶ್ನೆ. ಅವಮ್ಮನಿಗೂ ಅದು ಗೊತ್ತಿಲ್ಲ. ಯಾರದ್ದೋ ಹೇಳಿಕೆ ಮೇಲೆ ಒಬ್ಬ ನಿರಪರಾಧಿಯ ಮೇಲೆ ರಾಜಕೀಯ ದುರುದ್ದೇಶದಿಂದ ಬಂದು ಹೇಳಿದ ತಕ್ಷಣವೇ ಫಿರ್ಯಾದನ್ನು ಕೊಟ್ಟು ವಾದವನ್ನು ಮುಂದಕ್ಕೆ ಮಡತಕ್ಕದ್ದು ಸರಿಯಲ್ಲ. ನಿರಪರಾಧಿಗಳು ಯಾರಿದ್ದಾರೆ ಎಂಬುದು ವಿಚಾರಣೆಯಲ್ಲಿ ತಿಳಿದು ಬರುತ್ತದೆ. ಎರಡನೆಯದು ತಾವು ಪ್ರಸ್ತಾವನೆ ಮಾಡುತ್ತಾ ಅಧಿಕಾರಿಗಳ ವರ್ಗಾವಣೆ ಬಗ್ಗೆ ಹೇಳಿದ್ದೀರಿ. ಅಧಿಕಾರಿಗಳ ವರ್ಗಾವಣೆ ಬಗ್ಗೆನೂ, ಈ ಒಂದು ಮೊಕದ್ದಮೆಗೂ ದಯವಿಟ್ಟು ಒಂದಕ್ಕೊಂದಕ್ಕೆ ಸಂಬಂಧ ಕಲ್ಪಿಸಿ ಪೊಲೀಸರ ಮಾಡಿಸುವುದು ಬೇಡ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂಬ ವಾದವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ನಿಮಿಷ. ಅಪರಾಧಿ, ನಿರಪರಾಧಿ ಎಂದು ನಿರ್ಣಯ ಮಾಡತಕ್ಕದ್ದು ಕೋರ್ಟ್. ನಾವು, ನೀವು ಅಲ್ಲ. ನಾನು ರಮೇಶ್ ಅಪರಾಧಿ ಎಂದು ಹೇಳುವುದಿಲ್ಲ. ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏನು ಹೇಳುತ್ತಿದ್ದೇನೆ ಉದಾಹರಣೆಗೆ ಎಂದರೆ, ಚಂದ್ರೇಗೌಡರ ವಿರುದ್ಧ ಒಂದು 302ನೇ ಪ್ರಕರಣದಲ್ಲಿ ಕೊಲೆ ಮಾಡಿದ ಆಪಾದನೆ ಇದೆ ಎಂದು ಇಟ್ಟುಕೊಳ್ಳಿ. ನನ್ನನ್ನು ಏತಕ್ಕೆ ಬಂಧಿಸಲಿಲ್ಲ ಎಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಒಮ್ಮೆ ಇನ್ನೊಬ್ಬರು ಹೇಳಿದ್ದು ಹೇಳುತ್ತಿದ್ದೀರಿ. .

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ದೇಶದಲ್ಲಿ 302ನೇ ಪ್ರಕರಣದಲ್ಲಿ ಪ್ರೂವ್ ಆದಮೇಲೆ ಆರೋಪಿಯನ್ನು ಬಂಧಿಸಲಾಗುತ್ತದೆ ಎಂದು ಹೇಳಿಬಿಡಿ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಲಕ್ಷ್ಮಮ್ಮನಿಗೆ ಗೊತ್ತಿಲ್ಲ, ಅವರು ಇನ್ನೊಬ್ಬರು ಹೇಳಿದ್ದನ್ನು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ಲಕ್ಷ್ಮಮ್ಮನವರಿಗೆ ನಿನ್ನ ಗಂಡನನ್ನು ಸಾಯಿಸುತ್ತೇನೆಂದು ರಮೇಶ್ ಅವರು ಹೋಗಿ ಹೇಳಿದ್ದರೆ ಆವಮ್ಮ ಬಂದು ಅಲ್ಲಿ ಕಾದುಕೊಂಡಿರುತ್ತಿದ್ದರು. ಅವರಿಗೆ ಹೇಳದೇ ಹೊಡೆದು, ಅವರು ಅಲ್ಲಿದ್ದರೆ ಎಂದು ಕೇಳಿದರೆ ಇದು ಎಂತಹ ವಾದ. ಇಷ್ಟು ಸರಿಯೇ? ಅಧ್ಯಕ್ಷರೇ, ವಮ್ಮನಿಗೆ ರಮೇಶ್ ಅವರು ಹೋಗಿ ನಿನ್ನ ಗಂಡನನ್ನು ಇವತ್ತಿನ ದಿವಸ ಸಾಯಿಸುತ್ತೇನೆ ಅಲ್ಲಿಗೆ ಬಾ ಎಂದು ಹೇಳಿದ್ದರೆ ಆ ವಮ್ಮ ಅಲ್ಲಿ ಕಾಯ್ದು ಕುಳಿತುಕೊಳ್ಳುತ್ತಿದ್ದರು. ಇವರು ಹೇಳದೇ ಅಲ್ಲಿ ಹೋಗಿ ಆಕೆಯ ಗಂಡನನ್ನು ಸಾಯಿಸುತ್ತಾರೆ ಎಂದರೆ, ಆ ವಮ್ಮ ಅಲ್ಲಿದ್ದರೇ ಎಂದು ವಾದ ಇಡತಕ್ಕದ್ದು ಏನು ಇದರ ಅರ್ಥ?

ಶ್ರೀ ಟಿ.ಎಂ. ಮಂಜುನಾಥ್ : ಗೊತ್ತಿಲ್ಲದೆ ಆಪಾದನೆ ಮಾಡುವುದಕ್ಕೆ ಹೋಗಬಾರದು. ಯಾವುದನ್ನು ಮಾತನಾಡಬೇಕಾದರೂ ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಿದ್ದರೆ ಐ.ಪಿ.ಸಿ.ಯನ್ನು ಅಮೆಂಡ್ ಮಾಡಿಬಿಡಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಚಂದ್ರೇಗೌಡರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ ನೇರವಾಗಿ ಅವರು ಕೇಸ್ ರಿಜಿಸ್ಟರ್ ಮಾಡಿರುತ್ತಾರೆ. ಇದರ ಆಧಾರದ ಮೇಲೆ ದಸ್ತಗಿರಿ ಮಾಡುವುದಕ್ಕೆ ಒರುವುದಿಲ್ಲ. ಕಾರಣ ಏನೆಂದರೆ ಫರ್ದರ್ ಇನ್‌ವೆಸ್ಟಿಗೇಷನ್ ಮಾಡಿದ ಮೇಲೆ ಸೆಕ್ಷನ್ 162ರ ಪ್ರಕಾರ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿದ ಮೇಲೆ ಯಾರು ಮೇಲುನೋಟಕ್ಕೆ ತಪ್ಪಿತಸ್ಥರೆಂದು ಕಾಣುತ್ತಾರೆ. ಅವರನ್ನು ಅರೆಸ್ಟ್ ಮಾಡಬೇಕು. ಏತಕ್ಕೆಂದು ಹೇಳಿದರೆ, ಕಂಪ್ಲೇಂಟ್ ಫಿರ್ಯಾದು ಏನು ಕೊಟ್ಟಿದ್ದಾರೆ, ಫಿರ್ಯಾದಿ ವ್ಯಾಖ್ಯಾನ ಹೇಗೆ ಇದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ನಾನು ಓದಿ ಹೇಳುತ್ತೇನೆ. ಆ ಕಂಪ್ಲೇಂಟ್ ಇಂತಹವರು ಕೊಟ್ಟಿದ್ದಾರೆ ಅದು ಹೀಗಿದೆ. ಸ್ವಾಮಿ ದಿನಾಂಕ : 8–6–92ನೇ ಸೋಮವಾರ ಮಧ್ಯಾಹ್ನ ಸುಮಾರು 12 ಘಂಟೆಯ ಸಮಯದಲ್ಲಿ ನಮ್ಮ ಯಜಮಾನರಾದ ಗಂಗಯ್ಯನವರು ಕುಣಿಗಲ್ ಹೋಗಿ ಬರುತ್ತೇನೆಂದು ಹೇಳಿ ಮನೆಯಿಂದ ಹೋದರು. ಆದರೆ ಸಂಜೆ ಸುಮಾರು 6 ಘಂಟೆಯ ಹೊತ್ತಿಗೆ.

ನಮ್ಮ ಗ್ರಾಮದ ನಂಜುಂಡಯ್ಯನ ಗಂಗಾಧರ ಹೊನ್ನಯ್ಯನವರ ಮಗ ನಂಜುಂಡಯ್ಯ ಇವರುಗಳು ಬಂದು ಕುಣಿಗಲ್ ಪ್ರವಾಸಿ ಮಂದಿರದ ಹತ್ತಿರ ನನ್ನ ಗಂಡನನ್ನು ಕರ್ನಾಟಕ ರಾಜ್ಯದ ಮಂತ್ರಿಯಾದ ರಮೇಶ್ ಎಂಬುವರು ಪಿಸ್ತೂಲಿನಿಂದ ಹೊಡೆದು ಕೊಲೆ ಮಾಡಿದರು ಎಂದು ತಿಳಿಸಿದರು. ಹೀಗೆ ಯಾರೋ ತಿಳಿಸಿದರು ಎಂದು ಆ ವಮ್ಮ ಕಂಪ್ಲೇಂಟ್ ಕೊಟ್ಟಿದ್ದಾರೆ. ಆ ಎರಡು ಜನ ಬಂದು ನನಗೆ ತಿಳಿಸಿದರು. ಎಂದು ಹೇಳಿದ್ದಾರೆ. ಅವರ ಎರಡೂ ಜನರ ಹೇಳಿಕೆ, ಅವರು ಶಾಖಾ ಐ ವಿಟ್ನೆಸ್ ಎಂದು ತಿಳಿದುಕೊಳ್ಳೋಣ, ಅಥವಾ ಅವರಿಗೆ ಯಾರಾದರೂ ವರ್ತಮಾನ ಕೊಟ್ಟು ಅವರು ಅದನ್ನು ತಗೆದುಕೊಂಡು ಹೋಗಿ ಮುಟ್ಟಿಸಿದರು ಎಂದು ತಿಳಿದುಕೊಳ್ಳೋಣ The preliminary investigation starts from recording the statement of these two persons. ಆ ಎರಡು ಹೇಳಿಕೆ ರೆಕಾರ್ಡ್ ಆಗಲಿಲ್ಲ, ಸೆಕ್ಷನ್ 62 ಆಫ್ ಸಿ ಆರ್ ಪಿ ಸಿ ಪ್ರಕಾರ ಏನು ಡಿಸ್ಪೋಸ್ ಆಗುತ್ತದೆ ಅದರ ಬೇಸಿಸ್ ಮೇಲೆ ಫರ್ದರ್ ಇನ್‌ವೆಸ್ಟಿಗೇಷನ್ ನಡೆಯಬೇಕು. ಇದನ್ನು ಮಾಡದೇ ನೇರವಾಗಿ ಹೇಳುವುದಕ್ಕೆ ಹೋದರೆ, ಹೇಗೆ, ಏತಕ್ಕೆಂದರೆ ಆ ವಮ್ಮ ಏನೂ ಅಲ್ಲಿ ಬಂದಿಲ್ಲ; ಕಂಡಿಲ್ಲ.

Mr. Speaker : Let us have the patience to listen to each others arguments.

ಶ್ರೀ ಕಾಗೋಡು ತಿಮ್ಮಪ್ಪ : ಅದು ಇನ್‌ವೆಸ್ಟಿಗೇಷನ್ ಆಫೀಸರ್‌ಗೆ ಸಂಬಂಧಪಟ್ಟದ್ದು. ಘಟನೆ ಆದಮೇಲೆ ಅವರೇ ಹೇಳಿದ ಪ್ರಕಾರ ಫಿರ್ಯಾದಿ ಸತ್ತು ಹೋದವನ ಹೆಂಡತಿ ಏನು ಹೇಳಿದ್ದಾರೆ ಅವಳ ಹೇಳಿಕೆ ಪ್ರಕಾರ ಅವಳ ಫಿರ್ಯಾದಿ ಪ್ರಕಾರ ಇಂತಹವರು ಬಂದು ನಮಗೆ ಸುದ್ದಿ ಮುಟ್ಟಿಸಿದರು ಎಂದು ಇದೆ. ಸುದ್ದಿ ಮುಟ್ಟಿಸಿದವರು ಸ್ವತಃ ಕಂಡಿದ್ದಾರೆಯೇ ಎಂದು ಇಲ್ಲೇಲ್ಲೂ ಹೇಳಿಲ್ಲ. ಯಾರೋ ಸುದ್ದಿ ಕೊಟ್ಟಿದ್ದರು, ಆ ಸುದ್ದಿ ಪ್ರಕಾರ ಅವರು ಮುಟ್ಟಿಸಿದ್ದಾರೆ. ಅವರ ಹೇಳಿಕೆ ಆಗಬೇಕು. ಸುದ್ದಿ ಕೊಟ್ಟವರು ಯಾರು ಎಂದು ಫಿರ್ಯಾದಿಯಲ್ಲಿ ನಮೂದಿಸಿದ್ದಾರೆ ಅವರು ಹೇಳಿಕೆ ರೆಕಾರ್ಡ್ ಆಗಬೇಕು. ಒಂದು ವೇಳೆ ಅವರಿಗೆ ಎಲ್ಲಿಂದ ಸುದ್ದಿ ಬಂತು, ಅವರು ಕಣ್ಣಿನಿಂದ ನೋಡಿದ್ದಾರೆಯೇ, ಅದು ಏನು ಎನ್ನುವಂತಹದು ಸಹ ತನಿಖೆಯಾಗಬೇಕು.

ಆದ್ದರಿಂದ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಸಂಪೂರ್ಣ ಅವಕಾಶವನ್ನು ನಾವು ಮಾಡಿಕೊಡೋಣ. ಮಾಡಿ ಕೊಟ್ಟ ಮೇಲೆ ಅಕಸ್ಮಾತಾಗಿ ಸರ್ಕಾರದವರು ಇಲ್ಲೇ ಇದ್ದಾರೆ, ಇವರ ಹೇಳಿಕೆ ನಡೆದಿದೆಯೇ, ನಡೆದಿದ್ದರೆ ಯಾರ ಹೆಸರು ಬಂದಿದೆ ಎಂಬ ಬಗ್ಗೆ ಅವರು ಒಂದು ಹೇಳಿಕೆಯನ್ನು ಮಾಡಬಹುದು. ಆದ್ದರಿಂದ ಈ ಹಂತದಲ್ಲಿ ನಾವು ಸಂಶಯವನ್ನು ವ್ಯಕ್ತಮಾಡಿ ಯಾರ ಮೇಲೋ ಗೂಬೆ ಕೂರಿಸತಕ್ಕಂಥಾದ್ದು ಬೇಡ.

ಅಧ್ಯಕ್ಷರು : ಗೃಹ ಸಚಿವರೇ, ಈ ಇನ್‌ಸಿಡೆಂಟ್ ನಡೆದಿದ್ದು 8–6–92ರಂದು. ಇವತ್ತು 13–7–92, ಅಲ್ಲಿಗೆ 1 ತಿಂಗಳು 5 ದಿವಸ ಆಯಿತು. ಇನ್ನೂ ಏತಕ್ಕೆ ಇದು ಇನ್‌ವೆಸ್ಟಿಗೇಷನ್ ಆಗಿಲ್ಲ? ಅಷ್ಟೊಂದು ಕಠಿಣವಾದ ಇನ್‌ವೆಸ್ಟಿಗೇಷನ್ ಇದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್, ಯಾವ ಕಾರಣಕ್ಕಾಗಿ ಅದು ನಿಂತಿದೆ, ಯಾವ ಕಾರಣಕ್ಕೆ ಇಲ್ಲ ಅಥವಾ ಯಾವ ಸ್ಟೇಜ್‌ನಲ್ಲಿದೆ ಎನ್ನತಕ್ಕಂಥಾದ್ದರ ಬಗ್ಗೆ ಸರ್ಕಾರ ಒಂದು ಹೇಳಿಕೆ ಕೊಡುತ್ತದೆ. ಆದರೆ ಇದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿ ಇದ್ದಾಗ ಅದು ಡೀಲೇ ಆಗಿರಬಹುದು, ಅದಕ್ಕೆ ಏನು ಕಾರಣಗಳು ಎನ್ನತಕ್ಕಂಥಾದ್ದರ ವಿವರಗಳನ್ನು ಸಂಬಂಧಪಟ್ಟ ಮಂತ್ರಿಗಳು ಕೊಡುತ್ತಾರೆ. ಆದರೆ ಅವರು ಜ್ಯುಡಿಷಿಯಲ್ ಪ್ರೋಬ್‌ಗೆ ಡಿಮ್ಯಾಂಡ್ ಮಾಡಿದ್ದರು. ಅದರಂತೆ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಈಗಾಗಲೇ ಅನೌನ್ಸ್ ಮಾಡಿದ್ದಾರೆ. ಯಾರು ಜಡ್ಜ್ ಎನ್ನತಕ್ಕಂಥಾದ್ದು, ನೇಮಕ ಮಾಡತಕ್ಕಂಥಾದ್ದು. ಹೈಕೋರ್ಟಿಗೆ ಬಿಟ್ಟಿದ್ದು. ಆ ವಿಷಯ ಕೂಡ ಅವರ ಕಡೆಗೆ ಇದೆ; ಈಗ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿ ಈ ದೂರು ಇರುವುದರಿಂದ ಈಗ ನಾವು ಎಲ್ಲವನ್ನೂ ತಾರೀಖು ವೈಸ್ ಯಾರ್ಯಾರು ಕಂಪ್ಲೇಂಟ್ ಕೊಟ್ಟರು, ಯಾರು ಎಲ್ಲಿ ಹೋಗಿದ್ದಾರೆ? ಇದೆಲ್ಲದರ ಬಗ್ಗೆ ಕೂಡ ನಾವು ಈಗ ಮಾತನಾಡುತ್ತಾ ಹೋದರೆ definitely that will affect the investigation ನಾಳೆ ಜ್ಯುಡಿಷಿಯಲ್ ಪ್ರೋಬ್ ಏನಾಗುತ್ತದೆ, ಆದರ ಮೇಲೂ ಕೂಡ ಪರಿಣಾಮ ಬೀರುತ್ತದೆ. ಅದಕ್ಕಾಗಿ ದಯಮಾಡಿ ಈ ವಿಷಯವನ್ನು ಇಲ್ಲಿಗೇ ಬಿಟ್ಟು ಅದಕ್ಕೆ ಕಾರಣಗಳು ಏನು ಅಂತ ಕೇಳಿದರೆ ಬೇಕಾದರೆ ಆ ಸ್ಟೇಟ್‌ಮೆಂಟ್ ಅನ್ನು ಗೃಹಮಂತ್ರಿಗಳು ಮಾಡುತ್ತಾರೆ. ದಯವಿಟ್ಟು ವಿರೋಧ ಪಕ್ಷದ ನಾಯಕರು ಆ ರೀತಿ ಕೇಳತಕ್ಕಂಥಾದ್ದು ಉತ್ತಮ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇನ್‌ವೆಸ್ಟಿಗೇಷನ್ ಆಗುತ್ತದೆ ಎಂದು ಹೇಳಿದರು, ಅದು ಆಗಬೇಕು. ತಾವು ಹೇಳಿದ ಹಾಗೆ ಹಾಗೂ ನಾವು ಈಗ ಪ್ರಸ್ತಾಪ ಮಾಡಿದ ಹಾಗೆ ಅದು ತತಕ್ಷಣ ಪ್ರಾರಂಭವಾಗಬೇಕಾಗಿತ್ತು. ಅದು ಕೂಡ ಸೀರಿಯಸ್ ಅಲಿಗೇಷನ್ ಮಾಡಿರುವುದರಿಂದ ಆಪಾದನೆ ಬಲು ದೊಡ್ಡ ಆಪಾದನೆ ಇರುವುದರಿಂದ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಸೆಕ್ಷನ್ 302ರ ಪ್ರಕಾರ ಮಾಡಿದ್ದಾರೆ. ಅದು ಸರಿಯೋ ತಪ್ಪೋ ಆ ಮಾತು ಬೇರೆ. ತತಕ್ಷಣವೇ ತನಿಖೆ ಪ್ರಾರಂಭವಾಗಬೇಕಾಗಿತ್ತು. ಇಲ್ಲಿ ನಾವು ಕೇಳುವಾಗ ಸಬ್‌ಜುಡೀಸ್ ಆಗುವುದಿಲ್ಲ. ಏತಕ್ಕೆ ನೀವು ಮಾಡಲಿಲ್ಲ? ಎಕ್ಸಿಕ್ಯೂಟಿವ್ ಏತಕ್ಕೆ ತೆಗೆದುಕೊಂಡಿಲ್ಲ; ಇದುವರೆಗೂ ಏನು ಮಾಡುತ್ತಿದ್ದಾರೆ? ಯಾರನ್ನು ವಿಚಾರಣೆ ಮಾಡುತ್ತಿದ್ದಾರೆ? ವಿಚಾರಣೆ ಮಾಡಬೇಕಾದರೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ಪ್ರಕಾರ ಏನೇನು ಮಾಡಬೇಕಾಗಿತ್ತು ಅದನ್ನು ಮಾಡಿದ್ದಾರಾ ಅಥವಾ ಮಾಡಿಲ್ಲವೇ ಎಂದು ಕೇಳತಕ್ಕಂಥ ಹಕ್ಕು ಈ ಸದನದ ಎಲ್ಲಾ ಸದಸ್ಯರಿಗೆ ಇದೆ. ಏಕೆಂದರೆ ಪ್ರಾಣ ಮತ್ತು

ಆಸ್ತಿಯನ್ನು ರಕ್ಷಣೆ ಮಾಡತಕ್ಕಂಥ ಒಂದು ವ್ಯವಸ್ಥೆ ಕುಸಿದು ಬಿದ್ದ ಮೇಲೆ ಸರ್ಕಾರ ಇಲ್ಲವೆಂದು ಆಗುತ್ತದೆ. ಈ ದೃಷ್ಟಿಯಿಂದ ನೀವು ಇದನ್ನು ಮಾಡಬೇಕಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳಲ್ಲಿ ತತಕ್ಷಣ ವಿವರಗಳಿಗೆ ತಿಳಿಸಬಹುದು ಇಲ್ಲದೆ ಹೋದರೆ ತಮ್ಮ ಅಪ್ಪಣೆ ಪಡೆದು ಇನ್ನೊಂದು ದಿವಸ ತರಿಸಿಕೊಡಬಹುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹ ಮಂತ್ರಿಗಳು ಹೇಳಿಕೆ ಕೊಡುವುದಕ್ಕಿಂತ ಪೂರ್ವಭಾವಿಯಾಗಿ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಜುಡಿಷಿಯಲ್ ಎನ್‌ಕ್ವೈರಿಗೆ ಸರ್ಕಾರ ಆದೇಶ ನೀಡಿರಬಹುದು. But judicial enquiry is somthing different than judicial process.

ಅಧ್ಯಕ್ಷರು : ಪ್ರೊಫೆಸರ್ ಅವರೇ, ಇದು ಈ ಪ್ರಶ್ನೆ ನಮ್ಮ ಸದನದ ಕಾರ್ಯಕಲಾಪಗಳ ಸಮಿತಿ ಮುಂದೆ ಬಂತು. ಆಗ ಸ್ವಲ್ಪ ಚರ್ಚೆಗೆ ಅವಕಾಶ ಕೊಡಬೇಕೆಂದು ತೀರ್ಮಾನ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲ. ಮುಖ್ಯಮಂತ್ರಿಗಳು ಬಂದ ಮೇಲೆ ಇದನ್ನು ತೆಗೆದುಕೊಳ್ಳೋಣ.

Prof. M.D. Nanjunda Swamy : I just wanted to convey something because in the discussion that might take place later in the day, there need not be any confusion. Judicial enquiry is something different than judicial process. This case crime No. 116/92 is already on the files of the Judicial Magistrate, Kunigal. So, Criminal Procedure Law should take its own course. Logically the Criminal accused should present before the court and then may be bailed himself out. He should do that minimum.

ನಾನು ಮೊದಲೇ ಹೇಳಿದ ಹಾಗೆ ನಮ್ಮ ಗೌರವ ಕಾಪಾಡುವುದಕ್ಕೋಸ್ಕರ ನಮ್ಮೆಲ್ಲರ ಗೌರವ ಕಾಪಾಡುವುದಕ್ಕೋಸ್ಕರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬಂದ ಮೇಲೆ ನೀವು ಮಾತನಾಡುವುದಿಲ್ಲ ಹಾನೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದಕ್ಕೆ ಒಂದು ಮಾತು. ನಾನು ವಿವರಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇದುವರೆಗೂ ಕರ್ನಾಟಕ ರಾಜ್ಯದ ಇತಿಹಾಸಗಳಲ್ಲಿ ಕೊಲೆ ಆಪಾದನೆ ಐ.ಪಿ.ಸಿ. 302ರ ಪ್ರಕಾರ ದೂರು ದಾಖಲಾದ ಮೇಲೆ ಆಪಾದಿತನನ್ನು ಬಂಧಿಸದೆ ತನಿಖೆ ಮುಂದುವರಿಸತಕ್ಕಂಥಾದ್ದು ಯಾವುದಾದರೂ ಉದಾಹರಣೆ ಇದಯೇ ? ನಮ್ಮ ಹೋಮ್ ಮಿನಿಸ್ಟರ್ ಹೇಳಲಿ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಐ ಪಿ ಸಿ 302ರ ಪ್ರಕಾರ ದೂರು ದಾಖಲಾದ ಮೇಲೆ ಸಂಬಂಧಪಟ್ಟ ವ್ಯಕ್ತಿಯನ್ನು ಕೊಲೆ ಆಪಾದನೆ ಮೇಲೆ ಬಂಧಿಸದೇ ಇರುವುದನ್ನು ಈ ರಾಜ್ಯದ ಇತಿಹಾಸದಲ್ಲಿ ಕಂಡುಬರುವ ಒಂದು ಉದಾಹರಣೆಯನ್ನು ಕೊಡಿ. ಐ.ಪಿ.ಸಿ. 302ರ ಕಲಮಿನ ಮೇಲೆ ದೂರು ದಾಖಲಾದ ಮೇಲೆ ಅರೆಸ್ಟ್ ಮಾಡಿಲ್ಲವೆಂಬುದರ ಬಗ್ಗೆ ಮಾನ್ಯ ಹೋಮ್ ಮಿನಿಸ್ಟರ್‌ರವರು ಒಂದು ಉದಾಹರಣೆಯನ್ನು ಕೊಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವಿಚಾರ.

ಅಧ್ಯಕ್ಷರು : ಈಗ ಮಾನ್ಯ ಕಮ್ಮರುಲ್ ಇಸ್ಲಾದರ್‌ರವರು ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದಿರುವ ಲಾಕಪ್ ಡೆತ್ ವಿಚಾರದಲ್ಲಿ ರೈಜ್ ಮಾಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹಿಂದಿನ ದಿವಸ ನಾವು ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆವು. ವಕೀಲರುಗಳು ಎರಡು ದಿವಸದಿಂದ ಉಪವಾಸ ಮಾಡುತ್ತಿದ್ದಾರೆ.

ಅಧ್ಯಕ್ಷರು : ಅದು ತೀರ್ಮಾನವಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಸದನದ ಗಮನಕ್ಕೆ ತರಲಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಬಂದರು. ಈಗ ಖಾಸಗಿ ಪಗರಣದ ಬಗ್ಗೆ ತೆಗೆದುಕೊಳ್ಳೋಣವೇ ?